ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್ ಸಿ ನ್ಯಾಯಾಲಯ

ರಾಣೇಬೆನ್ನೂರು.

ಓ.ಎಸ್.ಸಂಖ್ಯೆ: 168/2016

ಪಿ ಡಬ್ಲ್ಯೂ: 3

ಸಾಕ್ಷಿಯ ಹೆಸರು : ವೆಂಕಟೇಶ

ತಂದೆಯ ಹೆಸರು : ರಾಮಪ್ಪ ಉಕ್ಕಡಗಾತ್ರಿ

ವಯಸ್ಸು : 39

ಉದ್ಯೋಗ : ಪಿ ಡಿ ಓ, ಚಳಗೇರಿ ಗ್ರಾಮ ಪಂಚಾಯತಿ

ವಾಸಸ್ಥಳ : ರಾಣೇಬೆನ್ನೂರು

ದಿನಾಂಕ: 20-03-2021 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ:

ನಾನು ಸೆಪ್ಟಂಬರ್ 2012 ರಿಂದ 2016 ರ ವರೆಗೆ ಚಳಗೇರಿ ಗ್ರಾಮ ಪಂಚಾಯತಿಯಲ್ಲಿ ಪಿ ಡಿ ಓ ಆಗಿ ಕೆಲಸ ನಿರ್ವಹಿಸಿರುತ್ತೇನೆ. 2012 ಕ್ಕೂ ಮೊದಲು ಜಿ ಹೆಚ್ ಸಂಗೂರು ರವರು ಪಿ ಡಿ ಓ ಆಗಿದ್ದರು.

ನಾನು ಬೀರಪ್ಪನವರನ್ನು ನೋಡಿರುತ್ತೇನೆ. ವಾದಿಯ ತಂದೆ ತಾಯಿಯರನ್ನು ನೋಡಿರುವುದಿಲ್ಲ. ಪ್ರತಿವಾದಿ ನಂ.1 ಮತ್ತು 2 ರವರ ನನಗೆ ಪರಿಚಯ ಇರುವುದಿಲ್ಲ. 3 ರಿಂದ 6 ನೇ ಪ್ರತಿವಾದಿಯರು ಪರಿಚಯ ಇದೆ. ನಿಪಿ 3 ರ ದಾಖಲೆಯು ವಾದಿಯ ಹೆಸರಿನಲ್ಲಿ ಖರೀದಿಯಾದ ಖರೀದಿ ಪತ್ರವಾಗಿರುತ್ತದೆ ನಿಪಿ 5 ರ ದಾಖಲೆಯು ವಾದಿ 6 ನೇ ಪ್ರತಿವಾದಿಯ ಹೆಸರಿನಲ್ಲಿ ಮಾಡಿಕೊಟ್ಟ ಖರೀದಿ ಪತ್ರವಾಗಿರುತ್ತದೆ. ನಿಪಿ 6 ರ ದಾಖಲೆಯು ದಾವಾ ಆಸ್ತಿಗೆ ಸಂಬಂಧಿಸಿದ ಉತಾರ ದಾಖಲೆಯಾಗಿರುತ್ತದೆ. ನಿಪಿ 7 6 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆಯಾದ ಉತಾರ ದಾಖಲೆಯಾಗಿರುತ್ತದೆ. ನಿಪಿ 8 ರ ದಾಖಲೆಯು ಪ್ರತಿವಾದಿಗಳು ವಾದಿಯ ಹೆಸರಿಗೆ ಬರೆದುಕೊಟ್ಟ ದಾಖಲೆಗಳಂತೆ ಹಕ್ಕು ಬದಲಾವಣೆ ವಹಿ ಎಂದರೆ ಸರಿ. ಸರ್ವೆ ನಂ.184 ಇದ್ದದ್ದು 184 ಅ ಎಂಬುದಾಗಿ ರಿ ಸರ್ವೆ ನಂಬರ್ ಆಗಿದೆ ಎಂದರೆ ಸರಿ. ನಿಪಿ 11 ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯ ಹೆಸರಿಗೆ ಕೊಟ್ಟ ಉತಾರವಾಗಿರುತ್ತದೆ. ನಿಪಿ 12 6 ನೇ ಪ್ರತಿವಾದಿಯ ಹೆಸರಿನಲ್ಲಿ ಕೊಟ್ಟಿರುವ ಉತಾರ ಎಂದರೆ ಸರಿ.

ವಾದಿಗಳು ಚಳಗೇರಿ ಗ್ರಾಮಕ್ಕೆ ಸೇರಿದ 1307/1 ಕ್ಕೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಕಾಯ್ದೆ ಅಡಿ ಅರ್ಜಿಯನ್ನು ನಮಗೆ ಕೊಟ್ಟಿದ್ದರು. ಚಳಗೇರಿ ಗ್ರಾಮ ಪಂಚಾಯತಿ ಆಸ್ತಿ ನಂ.1307 ಇದು ಕರಬಸಪ್ಪ ಮಹದೇವಪ್ಪ ದೊಡ್ಡಬೆಣ್ಣಿಯವರ ಹೆಸರಿನಲ್ಲಿ ಇರುತ್ತದೆ. ಸದರಿ

ಆಸ್ತಿಯು ಚಳಗೇರಿಯಲ್ಲಿ ಎಲ್ಲಿ ಬರುತ್ತದೆ ಎಂದು ಹೇಳಲು ಬರುವುದಿಲ್ಲ. ಆಸ್ತಿ ನಂ.1307 ನಂಬರ್ ಗೆ 1307/1 ಎಂದು ನೀಡಬೇಕಾದರೆ ಸದರಿ 1307 ರ ಒಂದು ಭಾಗ ಆಗಿರಬೇಕು ಎಂದರೆ ಸರಿಯಲ್ಲ. ಪಂಚಾಯತಿಯಲ್ಲಿ ಆಸ್ತಿಗಳಿಗೆ ಅನುಕ್ರಮವಾಗಿ ಕ್ರಮ ಸಂಖ್ಯೆಯನ್ನು ಕೊಡುತ್ತಾ ಬಂದಿರುತ್ತೇವೆ ಎಂದರೆ ಸರಿ. ಆಸ್ತಿ ನಂ.1307/1 ಆಸ್ತಿ ನಂ.1307 ರ ಯಾವ ಭಾಗಕ್ಕೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಿಪಿಸಿ ನಂ.1307 ರ ನಂತರ 1308 ಎಂದು ನಂಬರ್ ಬಂದಿದೆ ಎಂದರೆ ಸರಿ. ನಿಪಿ 40 ರಲ್ಲಿರುವಂತೆ ವಿಪಿಸಿ ನಂ.1307 ರ ನಂತರ ವಿಪಿಸಿ ನಂ.1307/1 ನ್ನು ಸೇರ್ಪಡೆ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 16 ರ ದಾಖಲೆಯು ನಮ್ಮ ಪಂಚಾಯತಿಯಲ್ಲಿ ನೀಡಲಾದ ದಾಖಲೆ ಎಂದರೆ ಸರಿ. ಅದರಲ್ಲಿ ವಿಪಿಸಿ ನಂ.1307/1 ಪಂಚಾಯತಿ ದಾಖಲಾತಿಗಳಲ್ಲಿ ನಮೂದನೆ ಇರುವುದಿಲ್ಲ ಎಂಬುದಾಗಿ ನಾನು ಮಾಹಿತಿ ಕೊಟ್ಟಿದ್ದೇನೆ. ಈ ಸಂಬಂಧವಾಗಿ ನಿಪಿ 16, 18, 20, 29, 33, 35, 37, 43, 45, 47, 49, 50, 77 ರಂತೆ ಹಿಂಬರಹ ಕೊಟ್ಟಿದ್ದೇನೆ ಎಂದರೆ ಸರಿ. ವಿಪಿಸಿ ನಂದ.1307/1 ಅಸ್ತಿತ್ವದಲ್ಲಿ ಇದೆಯೋ, ಇಲ್ಲವೋ ಎಂಬ ಬಗ್ಗೆ ನಾನು ಹೇಳಲು ಗೊತ್ತಾಗುವುದಿಲ್ಲ. ನಾನು ಸದರಿ ಆಸ್ತಿಯನ್ನು ಖುದ್ದಾಗಿ ನೋಡಿಲ್ಲ. ನನ್ನ ಹಿಂದಿನ ಪಿಡಿಓ ರವರು ಯಾವ ದಾಖಲಾತಿಗಳ ಆಧಾರದ ಮೇಲೆ ಯಾವಾಗ ಪ್ರತಿವಾದಿ 1 ರಿಂದ 3 ರವರ ಹೆಸರಿಗೆ ವಿಪಿಸಿ ನಂ.1307/1 ನಮೂದನೆ ಇಲ್ಲ ಎಂಬುದಾಗಿ ಹಿಂಬರಹ ಕೊಟ್ಟಿರುತ್ತಾರೆ ಎಂದರೆ ಸರಿ. ನಮ್ಮ ಪಂಚಾಯತಿ ಅಧಿಕಾರಿಗಳಲ್ಲಿ ವಿಪಿಸಿ ನಂ.1307/1 ಅಸ್ತಿತ್ವದಲ್ಲಿ ಇದೆ ಎಂಬುದನ್ನು ನೋಡಿರುವವರು ಯಾರೂ ಇರುವುದಿಲ್ಲ.

ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ

ನನಗೆ ನ್ಯಾಯಾಲಯದಿಂದ ನೋಟೀಸ್ ಬಂದಿರುತ್ತದೆ. ವಿಪಿಸಿ ನಂ.70 ನ್ನು ನಾನು ನೋಡಿರುವುದಿಲ್ಲ. ವಿಪಿಸಿ ನಂ.70 ಮತ್ತು ವಿಪಿಸಿ ನಂ.1307/1 ಬೇರೆ ಬೇರೆ ಎಂದರೆ ಸರಿ. ನಿಪಿ 41 ರ ದಾಖಲೆಯಂತೆ ಪ್ರತಿವಾದಿಗಳ ಹೆಸರಿಗೆ ಖರೀದಿ ಪತ್ರದ ಪ್ರಕಾರ ವಿಪಿಸಿ ನಂ1307/1 ಡ ನಂ.1562 ರ ದಾಖಲೆಯು ದಿನಾಂಕ 16-07-2013 ರಂದು ದಾಖಲಾಗಿದೆ ಎಂದರೆ ಸರಿ. ಅದರಂತೆ ನಿಪಿ 77 ಖಾತೆಯಾಗಿದೆ ಎಂದರೆ ಸರಿ. ನಿಪಿ 78 ರಂತೆ 1 ರಿಂದ 3 ನೇ ಪ್ರತಿವಾದಿಯರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ಮಾಹಿತಿ ಹಕ್ಕು ಕಾಯ್ದೆ ಅಡಿ ಸಲ್ಲಿಸಲಾದ ಅರ್ಜಿಗೆ ಪ್ರತಿವಾದಿ 1 ರಿಂದ 3 ರವರು ಮಾಲೀಕರಾಗಿರುತ್ತಾರೆ ಎಂಬುದಾಗಿ ದಾಖಲೆ ಸಲ್ಲಿಸಿರುತ್ತಾರೆ ಎಂದರೆ ಸರಿ. ವಿಪಿಸಿ ನಂ.70 ರಲ್ಲಿನ ಒಟ್ಟು ವಿಸ್ತೀರ್ಣ 15 ಗುಂಟೆಯಲ್ಲಿ ಪೂರ್ವ

ಭಾಗದ 5 ಗುಂಟೆಯನ್ನು 6ನೇ ಪ್ರತಿವಾದಿ ಖರೀದಿ ತೆಗೆದುಕೊಂಡಿದ್ದರು ಎಂದರೆ ಸರಿ. ವಾದಿಯ ಆಸ್ತಿಯು ಖರೀದಿ ಪತ್ರದಂತೆ ಚಕ್ಕಬಂದಿ ಇರುತ್ತದೆ ಎಂದರೆ ಸರಿ . ಖರೀದಿ ಪತ್ರದಂತೆ ಅವರು ವಹಿವಾಟಿನಲ್ಲಿದ್ದಾರೆ ಎಂದು ನಾನು ನೋಡಿರುವುದಿಲ್ಲ. 1 ರಿಂದ 3 ನೇ ಪ್ರತಿವಾದಿಗಳು ವಿಪಿಸಿ ನಂ.1307/1 ರಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ನಾನು ನೋಡಿರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ. ನನ್ನ ಸಮಕ್ಷಮ

ಸಹಿ
ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.